

بسم اللهِ الرّحمٰن الرّحيم

# ಜಲ್ಸ ಸಾಲಾನ ಖಾದಿಯಾನ್: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ನಂಬುವವರಲ್ಲಿ ಕಾಣಲು ಬಯಸುವ ಕ್ರಾಂತಿಯನ್ನು ಪ್ರತಿಯೊಬ್ಬನೂ ತನ್ನಲ್ಲಿ ಉಂಟುಮಾಡಬೇಕು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **26-12-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಈ ದಿನ ಖಾದಿಯಾನಿನಲ್ಲಿ ಜಲ್ಸ ಸಾಲಾನ ಪ್ರಾರಂಭವಾಗಿದೆ. ಇದೇ ರೀತಿ ಬೇರೆ ಕೆಲವು ದೇಶಗಳಲ್ಲೂ ಈ ದಿನಗಳಲ್ಲಿ ಜಲ್ಸ ಸಾಲಾನ ಜರಗುತ್ತಿವೆ. ಒಂದು ಕಾಲಘಟ್ಟದಲ್ಲಿ ಖಾದಿಯಾನ್‌ನಲ್ಲಿ ಮಾತ್ರ ಜಲ್ಸ ಸಾಲಾನ ಜರಗಿಸಲ್ಪಡುತ್ತಿತ್ತು. ವಿಭಜನೆಯ ನಂತರ ಪಾಕಿಸ್ತಾನದಲ್ಲೂ ಜಲ್ಸ ಸಾಲಾನ ಪ್ರಾರಂಭವಾಯಿತು. ಆದರೆ ಅಹ್ಮದಿಯ್ಯತ್ತಿನ ಶತ್ರುಗಳಿಗೆ ಮತ್ತು ಸರಕಾರಕ್ಕೆ ಪಾಕಿಸ್ತಾನದಲ್ಲಿ ಅಹ್ಮದಿಯರು ಅಲ್ಲಾಹನ ಮತ್ತು ಅವನ ಪ್ರಿಯ ಸಂದೇಶವಾಹಕರ ಬಗ್ಗೆ ಪ್ರಸ್ತಾಪಿಸುವುದು ಅತ್ಯಂತ ಅತೃಪ್ತಿಕರವಾಯಿತು. ಆ ಕಾರಣದಿಂದ ಪಾಕಿಸ್ತಾನದಲ್ಲಿ ಜಲ್ಸ ಸಾಲಾನ ನಡೆಸುವುದರ ಮೇಲೆ ನಿರ್ಬಂಧ ಹೇರಲಾಯಿತು. ಈ ರೀತಿ ಪಾಕಿಸ್ತಾನದಲ್ಲಿ ವಾಸಿಸುವ ಲಕ್ಷಗಟ್ಟಲೆ ಅಹ್ಮದಿಯರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಸ್ಮರಣೆ ಮಾಡದಂತೆ ತಾವು ಮಾಡಿದೆವು ಎಂದು ಅಹ್ಮದಿಯರ ಶತ್ರುಗಳು ಯೋಚಿಸಿದರು. ಪ್ರತಿ ವರ್ಷ ಡಿಸಂಬರ್ ತಿಂಗಳಲ್ಲಿ ಪಾಕಿಸ್ತಾನದಲ್ಲಿ ವಾಸಿಸುವ ಅಹ್ಮದಿಯರು ಜಲ್ಸ ಸಾಲಾನಕ್ಕೆ ಸಂಬಂಧಿಸಿ ಅಸಾಧಾರಣವಾಗಿ ಉದ್ವೇಗಭರಿತರಾಗುತ್ತಾರೆ. ಅಲ್ಲಾಹನ ಸನ್ನಿಧಿಯಲ್ಲಿ ಅವರ ಉದ್ವೇಗಭರಿತ ಪ್ರಾರ್ಥನೆಗಳು ಹೇಗೆ ಹರಿಯಬೇಕೆಂದರೆ, ಅಲ್ಲಾಹನ ಅನುಗ್ರಹಗಳನ್ನು ಹೀರುತ್ತಾ ಪ್ರತಿಯೊಂದು ವಿರೋಧ, ಪ್ರತಿಯೊಂದು ಕಷ್ಟ ನಷ್ಟಗಳನ್ನು ಕಸಕಡ್ಡಿಗಳ ಹಾಗೆ ದೂರ ಹರಿಸಿಕೊಂಡು ಹೋಗುವಂತಾಗಲಿ ಮತ್ತು ಅಹ್ಮದಿಯಾ ಲೋಕ ಇಂದು ಅನುಭವಿಸುತ್ತಿರುವ ಅನುಗ್ರಹಗಳನ್ನು ಸಹ ಪಾಕಿಸ್ತಾನದ ಅಹ್ಮದಿಯರು ಅನುಭವಿಸುವಂತಾಗಲಿ. ಅಹ್ಮದಿಯಾ ಜಮಾಅತಿನ ಶತ್ರುಗಳು ಮತ್ತು ಪಾಕಿಸ್ತಾನದಲ್ಲಿ ಅಧಿಕಾರಕ್ಕೆ ಬಂದ ವಿವಿಧ ಸರಕಾರಗಳು ಭಾವಿಸಿದುದೇನೆಂದರೆ, ಅಹ್ಮದಿಯಾ ಜಮಾಅತಿನ ಮೇಲೆ ಪಾಕಿಸ್ತಾನದಲ್ಲಿ ನಿರ್ಬಂಧ ಹೇರಿ ನಾವು ಅದರ ಅಭಿವೃದ್ಧಿಯನ್ನು ತಡೆಯುವೆವೆಂದು. ಆದರೆ ಅದರ ಪರಿಣಾಮವೇನಾಯಿತೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಿದ ಜಲ್ಸದ ವ್ಯವಸ್ಥೆ ಅಂತರಾಷ್ಟ್ರೀಯ ಸ್ವರೂಪವನ್ನು ಪಡೆದಿದೆ. ಅಹ್ಮದಿಯರು ಮಾತ್ರವಲ್ಲ, ಲೋಕದ ಅನೇಕ ದೇಶಗಳ ರಾಜಕೀಯ ನಾಯಕರು, ಇತರ ಧರ್ಮಗಳ ಅನುಯಾಯಿಗಳು ಮಾತ್ರವಲ್ಲ, ಕೆಲವು ಸಭ್ಯರಾದ ಮುಸ್ಲಿಮರು ಸಹ ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನದ ಬಗ್ಗೆ, ಅದು ಲೋಕಕ್ಕೆ ಇಸ್ಲಾಮಿನ ವಾಸ್ತವಿಕ ಚಿತ್ರಣ ನೀಡಿ ಇಸ್ಲಾಮಿನ ಸುಂದರ ಉಪದೇಶಗಳನ್ನು ಜನರಿಗೆ ತಿಳಿಸಿಕೊಡುತ್ತದೆ ಎಂದು ಹೇಳುತ್ತಾರೆ. ಇದು ಅಲ್ಲಾಹನ ವಿಧಿನಿರ್ಣಯಗಳಲ್ಲಿ ಒಂದಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ಪಷ್ಟ ಶಬ್ದಗಳಲ್ಲಿ ಹೀಗೆ ಹೇಳಿರುವರು: ಈ ಜಲ್ಸವನ್ನು ಇತರ ಸಾಮಾನ್ಯ ಜನರ ಸಮ್ಮೇಳನಗಳ ಹಾಗೆ ಗಣಿಸಬೇಡಿರಿ. ಇದರ ಅಸ್ತಿಭಾರ ಸತ್ಯಕ್ಕೆ ಬೆಂಬಲ ಮತ್ತು ಇಸ್ಲಾಮಿನ ಪ್ರಚಾರದ ಮೇಲಿದೆ.

ಈ ಜಲ್ಸ ಎಂತಹ ಜಲ್ಸವೆಂದರೆ, ಇದರ ಮೂಲಕ ಲೋಕದಲ್ಲಿ ಇಸ್ಲಾಮಿನ ಹೆಸರು ಉನ್ನತಿಗೇರುತ್ತದೆ. ಈ ಜಲ್ಸದಲ್ಲಿ ಭಾಗವಹಿಸುವವರು ಅವರ ಜ್ಞಾನ ಮತ್ತು ಕರ್ಮಗಳಲ್ಲಿ ಕ್ರಾಂತಿ ಉಂಟುಮಾಡುವುದನ್ನು ಕಲಿತುಕೊಳ್ಳುವರು. ಈ ಜ್ಞಾನ ಮತ್ತು ಕರ್ಮ ಸಂಬಂಧವಾದ ಕ್ರಾಂತಿಯ ಕಾರಣ ಲೋಕಕ್ಕೆ ಇಸ್ಲಾಮಿನ ಸೌಂದರ್ಯವನ್ನು ಪ್ರಕಟಿಸುವುದು ಮತ್ತು ಇಸ್ಲಾಮ್ ಎಲ್ಲ ಧರ್ಮಗಳಿಗಿಂತ ಪರಿಪೂರ್ಣವೂ ಮತ್ತು ಶ್ರೇಷ್ಠವಾದುದೆಂದು ಸಾಬೀತುಗೊಳಿಸುವುದು. ಏಕೆಂದರೆ ಮನುಷ್ಯನ ಪ್ರಯತ್ನ ಮಾತ್ರವಲ್ಲ ಅಲ್ಲಾಹನ ನೆರವು ಈ ಕೆಲಸ ಈಡೇರುವಂತೆ ಮಾಡುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನೇ ತನ್ನ ಕೈಗಳಿಂದ ಇರಿಸಿದ್ದಾನೆ. ಇದರಲ್ಲಿ ಸೇರಲು ಜನಾಂಗಗಳನ್ನು ಸಿದ್ಧಪಡಿಸಿರುವನು. ಅವು ಬೇಗನೆ ಬಂದು ಸೇರುವುವು. ಇದು ಆ ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಯಾವುದೂ ಅಸಾಧ್ಯವಾಗಿರುವುದಿಲ್ಲ. ಈ ಜಮಾಅತ್ ಬೇಗನೆ ಎಂತಹ ಸ್ಥಿತಿಗೆ ತಲಪುವುದೆಂದರೆ, ಪ್ರಕೃತಿವಾದಿಗಳಾದ ಜನರ ಸುಳಿವು ಸಿಗಲಾರದು. ಅಂಧವಿಶ್ವಾಸಿಗಳು ಇಲ್ಲದಾಗುವರು. ಅದ್ಭುತ ದೃಷ್ಟಾಂತಗಳನ್ನು ನಿರಾಕರಿಸುವವರು ಬಾಕಿಯಾಗಿ ಉಳಿಯಲಾರರು. ಪವಿತ್ರ ಖುರ್‌ಆನ್ ವಚನಗಳಿಗೆ ವಿರುದ್ಧ ನಿರರ್ಥಕ ಹದೀಸುಗಳನ್ನು ಪ್ರಸ್ತಾಪಿಸುವವರು ಇಲ್ಲದಾಗುವರು. ಅಲ್ಲಾಹನು ಈ ಜಮಾಅತಿಗೋಸ್ಕರ ಸ್ಪಷ್ಟ ಮಾರ್ಗಗಳನ್ನು ತೆರೆದಿಡುವನು. ಆ ಮಾರ್ಗ ಪವಿತ್ರ ಖುರ್‌ಆನ್ ಉಪದೇಶಿಸಿದ ಮಾರ್ಗವಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರಿಗೆ ಕಲಿಸಿದ ಮಾರ್ಗವಾಗಿದೆ. ಅದು ಸಿದ್ದೀಖ್, ಶಹೀದ್ ಮತ್ತು ಸಾಲಿಹರು ಆರಂಭದಿಂದಲೇ ಗಳಿಸುತ್ತಿದ್ದ ಮಾರ್ಗವಾಗಿದೆ. ಹೀಗೆಯೇ ಆಗುವುದು. ಖಂಡಿತ ಆಗಿಯೇ ತೀರುವುದು. ಯಾರಿಗೆ ಕಿವಿಗಳಿವೆಯೋ ಅವರು ಆಲಿಸಲಿ. ಯಾರಿಗೆ ಈ ನೇರಮಾರ್ಗ ತೆರೆಯಲ್ಪಡುತ್ತದೆಯೋ ಅವರು ಅನುಗ್ರಹಕ್ಕೆ ಪಾತ್ರರಾದವರಾಗಿದ್ದಾರೆ.

ಈ ಜಲ್ಸ ನಿಶ್ಚಯವಾಗಿಯೂ ಮನುಷ್ಯ ಪ್ರಕೃತಿಯಲ್ಲಿ ಕ್ರಾಂತಿ ಉಂಟುಮಾಡುವ ಮಾರ್ಗವಾಗಿದೆ. ಅದು ಹಾಗೆ

ಆಗಬೇಕಾಗಿದೆ. ಲೋಕದ ವಿವಿಧ ದೇಶಗಳಲ್ಲಿ ಜಲ್ಸಗಳು ಜರಗುತ್ತಿವೆ ಅವುಗಳಲ್ಲಿ ವಿವಿಧ ಜನಾಂಗಗಳು ಭಾಗವಹಿಸುತ್ತಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಜನಾಂಗಗಳು ಇದರಲ್ಲಿ ಭಾಗವಹಿಸುತ್ತವೆ. ಈ ದಿನ ಖಾದಿಯಾನಿನಲ್ಲಿ ಜರಗುವ ಜಲ್ಸದಲ್ಲಿ ಮೂವತ್ತೊಂದು ದೇಶಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ. ಆಫ್ರಿಕಾ, ಏಶ್ಯಾ, ಅರಬ್, ಅಮೇರಿಕ, ಯುರೋಪು, ಆಸ್ಟ್ರೇಲಿಯ, ದೂರ ಪೂರ್ವ ದೇಶಗಳು ಮತ್ತು ದ್ವೀಪಗಳ ನಿವಾಸಿಗಳೂ ಇದರಲ್ಲಿ ಭಾಗವಹಿಸುತ್ತಿದ್ದಾರೆ. ಒಂದು ದೇಶದಲ್ಲಿ ಜಲ್ಸ ಸಾಲಾನದ ಮೇಲೆ ನಿರ್ಬಂಧ ಹೇರಿ ತಾವು ಅಹ್ಮದಿಯ್ಯತ್‌ಗೆ ಬಹಳ ಬಲವಾದ ಹೊಡೆತ ನೀಡಿದೆವು ಎಂದು ಶತ್ರುಗಳು ಭಾವಿಸಿದ್ದರು. ಶತ್ರುಗಳು ಅವಿವೇಕಿಗಳಾಗಿದ್ದಾರೆ. ಅವರು ತಿಳಿದು ಕೊಳ್ಳುವುದಿಲ್ಲ. ಈ ಕಾಲಘಟ್ಟದ ಇಮಾಮರೂ (ಇಮಾಮುಝ್ಝಮಾನ್) ಮುಹಮ್ಮದೀ ಮಸೀಹರೂ ಆಗಿ ಆಗಮಿಸಿದವರು, ‘‘ನಾನು ಅಹ್ಮದಿಯಾ ಜಮಾಅತನ್ನು ಸ್ಥಾಪಿಸುತ್ತೇನೆ’’ ಎಂದು ಹೇಳಿರಲಿಲ್ಲ. ಅವರು ಹೇಳಿದ್ದು, ‘‘ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನೇ ತನ್ನ ಕೈಗಳಿಂದ ಹಾಕಿದ್ದಾನೆ’’ ಎಂದು. ಅಹ್ಮದಿಯಾ ಜಮಾಅತಿನ ಶತ್ರುಗಳಿಗೆ ಶಕ್ತಿ ಇದ್ದರೆ ಅವರು ಅಲ್ಲಾಹನನ್ನು ಎದುರಿಸಲಿ. ಆದರೆ ಅವರು ನೆನಪಿಟ್ಟುಕೊಳ್ಳಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನಿಗೆ ಪ್ರಿಯರಾಗಿದ್ದಾರೆ. ಅವರೊಂದಿಗೆ ಅಲ್ಲಾಹನ ವಿಶೇಷ ಸಹಾಯ ಮತ್ತು ಬೆಂಬಲವಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಿರೋಧಿಸುವ ಮೊದಲು ಅವರ ಈ ಘೋಷಣೆಯ ಬಗ್ಗೆ ಚಿಂತಿಸಬೇಕು: **ಅಯೆ ಮೇರೆ ಬದ್‌ಖ್ವಾಹ್ ಕರ್‌ನಾ ಹೋಶ್‌ಕರ್‌ಕೆ ಮುಝ್ ಪೆ ವಾರ್**. ‘ನನಗೆ ಕೇಡು ಬಯಸುವವನೇ, ನನ್ನ ಮೇಲೆ ಆಕ್ರಮಣ ಮಾಡುವ ಮೊದಲು ಚಿಂತಿಸು.’

ಶತ್ರುಗಳು ನೆನಪಿಡಬೇಕಾದುದೇನೆಂದರೆ, ಒಂದು ಸರಕಾರ ಮಾತ್ರವಲ್ಲ, ಲೋಕದ ಎಲ್ಲ ಸರಕಾರಗಳು ಜೊತೆ ಸೇರಿದರೂ ಲೋಕದಿಂದ ಅಹ್ಮದಿಯಾ ಜಮಾಅತನ್ನು ಅಳಿಸಿಬಿಡಲು ಸಾಧ್ಯವಿಲ್ಲ, **ಇನ್‌ಶಾ ಅಲ್ಲಾಹ್.** ಏಕೆಂದರೆ ಅಲ್ಲಾಹನು ಕಳುಹಿಸಿದ ಪರಿಪೂರ್ಣವೂ ನೈಜವೂ ಆಗಿರುವ ಇಸ್ಲಾಮ್ ಧರ್ಮದ ಉಪದೇಶಗಳನ್ನು ಎಲ್ಲ ವಿಧ ದೋಷಗಳನ್ನು ನಿವಾರಿಸಿ ನೈಜರೂಪದಲ್ಲಿ ಲೋಕದಲ್ಲಿ ಸ್ಥಾಪಿಸಲಿರುವ ಜಮಾಅತ್ ಇದು ಮಾತ್ರವಾಗಿದೆ. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಂದ ಇಸ್ಲಾಮ್ ಅದಾಗಿದೆ.

ಒಂದು ಕಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ‘‘ನೀವು ನೆನಪಿಡಿರಿ, ಈ ಜಮಾಅತ್ ನಾನು ಮಾಡಿದ ಒಂದು ವ್ಯಾಪಾರ ಮಳಿಗೆಯಾಗಿದ್ದರೆ ಅದು ನಾಮಾವಶೇಷವಾಗುವುದು. ಆದರೆ ಅದು ಅಲ್ಲಾಹನಿಂದ ಸ್ಥಾಪಿತವಾದುದಾಗಿದ್ದರೆ– ಅದು ನಿಶ್ಚಯವಾಗಿಯೂ ದೇವನ ಕಡೆಯಿಂದ ಸ್ಥಾಪಿತವಾಗಿದೆ– ಸರ್ವ ಲೋಕವು ಅದನ್ನು ವಿರೋಧಿಸಿದರೂ ಅದು ಅಭಿವೃದ್ಧಿ ಹೊಂದುವುದು. ಅದು ವಿಶಾಲವಾಗಿ ಹರಡುವುದು. ದೇವದೂತರು ಅದನ್ನು ಸಂರಕ್ಷಿಸುವರು. ಒಬ್ಬ ಸಹ ನನ್ನೊಂದಿಗಿರದಿದ್ದರೂ, ಯಾರೂ ನನಗೆ ಸಹಾಯ ನೀಡದಿದ್ದರೂ ಈ ಜಮಾಅತ್ ಜಯಶಾಲಿಯಾಗುವುದೆಂದು ನಾನು ದೃಢವಾಗಿ ನಂಬುತ್ತೇನೆ.’’

ಶತ್ರುಗಳು ಪ್ರಯತ್ನ ಮಾಡುವರು ಮತ್ತು ಈ ಜಮಾಅತನ್ನು ನಾಶಗೊಳಿಸುವರು ಎನ್ನುವುದು ಅಸಂಭವ್ಯವೇ ಆಗಿದೆ. ಆದರೆ ನಾವು ಸಹ ನಮಗೆ ಕೆಲವು ಜವಾಬ್ದಾರಿಗಳು ಇವೆ ಎಂದು ನೆನಪಿಡಬೇಕು. ಈ ಜಮಾಅತ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಿದ ಒಂದು ಸಾಮಾನ್ಯ ಜಮಾಅತಾಗಿದೆ ಎಂದು ನಾವು ಭಾವಿಸಬಾರದು. ಇದು ಅವರು ಜಾರಿಗೊಳಿಸಿದ ಒಂದು ಸಾಮಾನ್ಯ ಜಲ್ಸವಾಗಿದೆ ಎಂದು ಸಹ ಯೋಚಿಸಬಾರದು. ಒಬ್ಬ ಅಹ್ಮದಿಯನ್ನು ಅಹ್ಮದಿ ಎಂದು ಕರೆಯುವುದು ಸಾಮಾನ್ಯವಾದುದೇನೂ ಅಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ‘‘ಕೆಲವು ಬಲಹೀನರು ನನ್ನನ್ನು ಬಿಟ್ಟು ಹೋಗುವರು. ಲೋಕದಲ್ಲಿರುವ ಎಲ್ಲರೂ ನನ್ನನ್ನು ಬಿಟ್ಟು ಹೋದರೂ ಅಲ್ಲಾಹನು ನನ್ನ ಕೈಬಿಡಲಾರನು. ಇದು ಅವನ ವಾಗ್ದಾನವಾಗಿದೆ.’’ ಪ್ರತಿಯೊಬ್ಬ ಅಹ್ಮದಿಯ ಹೊಣೆಗಾರಿಕೆ ಏನೆಂದರೆ ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿರುವನೆಂದು ವಾದಿಸುವುದಾದರೆ, ಅವನು ಅಲ್ಲಾಹನ ನೆರವು ಮತ್ತು ಬೆಂಬಲದಲ್ಲಿ ಭಾಗೀದಾರನಾಗಲು ಬಯಸುವುದಾದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ನಂಬುವವರಲ್ಲಿ ಕಾಣಲು ಬಯಸುವ ಕ್ರಾಂತಿಯನ್ನು ಅವನು ತನ್ನಲ್ಲಿ ಉಂಟುಮಾಡಬೇಕು. ಆದುದರಿಂದ ನಾವು ಜಲ್ಸದಲ್ಲಿ ಭಾಗವಹಿಸುವುದು ಮಾತ್ರ ಸಾಕಾಗಲಾರದು. ನಾವು ನಮ್ಮನ್ನು ಪರಿಶೀಲಿಸುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳ ವಾರೀಸುದಾರರಾಗುವವರೊಂದಿಗೆ ನಾವು ಸೇರಬೇಕು. ನಾವು ಜಲ್ಸದಲ್ಲಿ ಭಾಗವಹಿಸಿದೆವು ಎಂಬ ಕಾರಣ ಮಾತ್ರ ನಾವು ಆ ದುಆಗಳ ವಾರೀಸುದಾರರಾಗಲು ಸಾಕಾಗುವುದೇ? ಮೂರುನಾಲ್ಕು ಗಂಟೆ ಜಲ್ಸದ ಕಾರ್ಯಕ್ರಮ ನೋಡಿದೆವು, ಘೋಷಣೆ ಕೂಗಿದೆವು ಅಲ್ಲಿಗೆ ಕೆಲಸ ಮುಗಿಯಿತು. ಇದು ಸಾಕಾಗುವುದೇ? ಅದು ಸಾಕಾಗಲಾರದು. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದುಆಗಳ ವಾರೀಸುದಾರರಾಗಲು ನಮ್ಮ ಪರಿಶೀಲನೆ ಆವಶ್ಯಕವಾಗಿದೆ. ನಾವು ಜಲ್ಸದಲ್ಲಿ ಆಲಿಸಿದುದು ಅಥವಾ ನಾವು ಪ್ರಕಟಿಸಿದ ಭಾವನೆಗಳು ತಾತ್ಕಾಲಿಕವೋ ಅಥವಾ ಸ್ಥಿರವಾಗಿ ನಮ್ಮ ಹೊಣೆಗಾರಿಕೆಗಳ ಭಾಗವಾಗಲಿವೆಯೋ ಎಂದು ಪರಿಶೀಲಿಸಬೇಕು. ಜಲ್ಸದ ಸಂದರ್ಭದಲ್ಲಿ ಉಂಟಾದ ಪ್ರಭಾವ ಪ್ರತಿಯೊಂದು ಸಲ ಜಲ್ಸದಿಂದ ಎದ್ದೇಳುವಾಗ, ‘‘ನಾವು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳೊಂದಿಗೆ ಅಲ್ಲಾಹನು ಮತ್ತು

ಅವನ ಸಂದೇಶವಾಹಕರು ನಮ್ಮಲ್ಲಿ ಉಂಟುಮಾಡಲು ಬಯಸುವ ಕ್ರಾಂತಿಯನ್ನು ನಮ್ಮಲ್ಲಿ ಉಂಟುಮಾಡಲು ಪ್ರಯತ್ನಿಸುತ್ತೇವೆ ಎಂದು ನಿರ್ಧರಿಸಿ ಪ್ರಯತ್ನಿಸುವುದಾದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳಿಗೆ ವಾರೀಸುದಾರರಾಗುತ್ತಾ ನೀವು ಮುಂದುವರಿಯುವವರಾಗುವಿರಿ. ಪ್ರಯತ್ನ ಮತ್ತು ದುಆ ಇವು ಎರಡು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದುಆಗಳಿಗೆ ವಾರೀಸುದಾರರಾಗಲು ಆವಶ್ಯಕವಾಗಿವೆ.''

ಜಲ್ಸದ ಬಗ್ಗೆ ವಿವರಿಸುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಹೇಳುವುದರೊಂದಿಗೆ ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸುವ ಬಗ್ಗೆಯೂ ಹೇಳಿರುವರು. ಅವರು ಜಲ್ಸದಲ್ಲಿ ಭಾಗವಹಿಸುವವರನ್ನು ಒಳಿತು, ದೇವಭಯ, ಧರ್ಮಶ್ರದ್ಧೆ ಇವುಗಳ ಕಡೆಗೆ ಗಮನ ಹರಿಸುವಂತೆ ಮಾಡಿದ ನಂತರ ಬಹಳ ನೋವಿನಿಂದ ತನ್ನನ್ನು ನಂಬುವವರ ಬಗ್ಗೆ ಪ್ರತೀಕ್ಷೆ ಇಟ್ಟಿರುವುದೇನೆಂದರೆ, ತನ್ನನ್ನು ನಂಬುವವರು ಮೃದು ಹೃದಯರು, ಪರಸ್ಪರ ಪ್ರೀತಿಸುವವರೂ, ಸಹೋದರ ಭಾವನೆ ಹೊಂದಿದವರೂ ಆಗಿ ಅವುಗಳಿಗೆ ಮಾದರಿಯಾಗಬೇಕೆಂದಾಗಿದೆ. ಅವರು ವಿನಯವಂತರಾಗಬೇಕು. ಒಬ್ಬರಿನ್ನೊಬ್ಬರಿಗೋಸ್ಕರ ತ್ಯಾಗ ಮಾಡುವವರಾಗಬೇಕು. ಸತ್ಯದ ಉನ್ನತ ಮಟ್ಟ ಸ್ಥಾಪಿಸುವವರಾಗಬೇಕು. ಕೆಟ್ಟ ಸ್ವಭಾವಗುಣಗಳನ್ನು ಹೊಂದುವುದರಿಂದ ದೂರವಿರಬೇಕು. ಈ ವಿಷಯಗಳ ಬಗ್ಗೆ ಪ್ರತಿಯೊಬ್ಬನೂ ತನ್ನನ್ನು ಪರಿಶೀಲಿಸುವುದು ಆವಶ್ಯಕವಾಗಿದೆ. ಈ ಉನ್ನತ ಸ್ವಭಾವಗುಣಗಳಲ್ಲಿ ನಾವು ಮಾದರಿಯಾಗಿದ್ದೇವೋ ಎಂದು ಪರಿಶೀಲಿಸಬೇಕು. ಬೇರೆಯವರಿಗೋಸ್ಕರ ತ್ಯಾಗಮಾಡುವುದರಲ್ಲಿ ನಾವು ಮಾದರಿಯಾಗಲು ಪ್ರಯತ್ನಿಸುತ್ತಾ ಇದ್ದೇವೋ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರತೀಕ್ಷಿಸಿದ ರೀತಿಯಲ್ಲಿ ನಾವು ವಿನಯಾನ್ವಿತರಾಗಿದ್ದೇವೆಯೋ? ಅವುಗಳ ಬಗ್ಗೆ ಪವಿತ್ರ ಖುರ್‌ಆನ್ ಪ್ರಸ್ತಾಪಿಸಿದೆ. ಅವುಗಳ ಮಾದರಿಯನ್ನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ನಮ್ಮ ಮುಂದೆ ಇರಿಸಿರುವರು. ಹೀಗೆ ನಾವು ಪರಿವರ್ತನೆಗೊಂಡಿಲ್ಲವಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳ ಲಾಭ ಪಡೆಯಲು ಮತ್ತು ಅಲ್ಲಾಹನ ಅನುಗ್ರಹ ಗಳಿಸಲು ನಾವು ಮಾಡುವ ಪ್ರಯತ್ನ ನಿರರ್ಥಕವಾಗುತ್ತದೆ ಮತ್ತು ನಾವು ಬಹಳ ದೊಡ್ಡ ಪ್ರತೀಕ್ಷೆ ಇರಿಸಿದಂತಾಗುತ್ತದೆ. ವಿವಿಧ ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಜರಗಿಸುವ ಜಲ್ಸಗಳಲ್ಲಿ ಭಾಗವಹಿಸುವವರು ಮತ್ತು ವಿಶಿಷ್ಟವಾಗಿ ಪರಿಶುದ್ಧ ಮಸೀಹರ ಊರಾದ ಖಾದಿಯಾನಿನ ಜಲ್ಸದಲ್ಲಿ ಭಾಗವಹಿಸುವವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದಲ್ಲಿ ಭಾಗವಹಿಸುವ ಜನರೊಂದಿಗೆ ನೋವಿನಿಂದ ನುಡಿದ ಮಾತುಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ನಾವು ವಾಸ್ತವಿಕವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳ ವಾರೀಸುದಾರರಾಗಲು ಹೀಗೆ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಸ್ಥಳಗಳಲ್ಲಿ ತಾವು ತನ್ನ ಅನುಯಾಯಿಗಳಿಂದ ಏನನ್ನು ಪ್ರತೀಕ್ಷಿಸುತ್ತಾರೆಂದು ಬರೆದಿದ್ದಾರೆ. ನಾವು ಲೌಕಿಕ ಸಂಬಂಧಗಳಲ್ಲಿ ಹೀಗೆ ಕಾಣುತ್ತೇವೆ– ಯಾವ ಮಕ್ಕಳು ತಮ್ಮ ತಂದೆ ತಾಯಂದಿರ ಮಾತುಗಳನ್ನು ಕೇಳುತ್ತಾ ಅವರ ಸೇವೆ ಮಾಡುತ್ತಾರೋ ಮತ್ತು ಅವರನ್ನು ಅನುಸರಿಸುವುದರಲ್ಲಿ ಮುಂದೆ ಇದ್ದಾರೋ ಅಂತಹ ಮಕ್ಕಳಿಗೆ ತಂದೆ ತಾಯಂದಿರು ಹೆಚ್ಚು ಸಮೀಪವಾಗಿ ಇರುತ್ತಾರೆ ಮತ್ತು ತಂದೆ ತಾಯಂದಿರು ಅವರ ಪರವಾಗಿ ಹೆಚ್ಚು ಪ್ರಾರ್ಥನೆ ಮಾಡುತ್ತಾರೆ. ಆದರೆ ಈ ಸಂಬಂಧಕ್ಕಿಂತ ಅತ್ಯಂತ ಉನ್ನತ ಮಟ್ಟದ ಸಂಬಂಧ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೊಂದಿದ್ದೇವೆ. ಅದರ ಫಲ ನಮಗೆ ಸಿಗಬೇಕಾದರೆ ನಮ್ಮ ಸಂಬಂಧವನ್ನು ವರ್ಧಿಸುವವರಾಗಬೇಕು. ಜಲ್ಸದಲ್ಲಿ ಭಾಗವಹಿಸುವವರಿಗೆ ದುಆಗಳ ಎಂತಹ ಖಜಾನೆ ಇದೆ ಎಂದರೆ ಅದು **ಖಿಯಾಮತ್** ತನಕ ಮುಂದುವರಿಯುತ್ತಾ ಇರುವುದು.

ನಾವು ಈ ಪ್ರಾರ್ಥನೆಗಳ ಲಾಭ ಪಡೆಯುವುದಾದರೆ ನಾವು ಅದೃಷ್ಟಶಾಲಿಗಳಾಗುವೆವು. ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಕೆಲವು ಉಪದೇಶಗಳನ್ನು ನಿಮ್ಮ ಮುಂದೆ ಇರಿಸುವೆನು. ಅದರಲ್ಲಿ ಅವರು ಜಮಾಅತಿನ ಸದಸ್ಯರ ಬಗ್ಗೆ ಇರಿಸಿದ ಪ್ರತೀಕ್ಷೆ ಏನೆಂದು ಸ್ವಲ್ಪ ಮಟ್ಟಿಗೆ ತಿಳಿಯುವುದು. ಅವರು ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: **''ನಮ್ಮ ಜಮಾಅತ್ ಒಂದು ಜಮಾಅತ್ ಆಗಲು ಬಯಸುವುದಾದರೆ, ಅದು ಒಂದು ಮೃತ್ಯುವನ್ನು ಹೊಂದಬೇಕು. ಸ್ವಾರ್ಥ ವಿಷಯಗಳಿಂದ ಮತ್ತು ಸ್ವಾರ್ಥ ಉದ್ದೇಶಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕು. ಅಲ್ಲಾಹನಿಗೆ ಎಲ್ಲ ವಸ್ತುಗಳ ಮೇಲೆ ಆದ್ಯತೆ ನೀಡಬೇಕು. ಅನೇಕ ತೋರಿಕೆಯ ಕೆಲಸಗಳಿಂದ ಮತ್ತು ನಿರರ್ಥಕ ಕೆಲಸಗಳಿಂದ ಮನುಷ್ಯನು ನಾಶವಾಗುತ್ತಾನೆ.''**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ''ನೀವು ಎಲ್ಲ ವಿಧ ಭಾವೋದ್ವೇಗಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ನಿಮ್ಮನ್ನು ನೋಡುವ ಪ್ರತಿಯೊಬ್ಬ ಅಪರಿಚಿತ ವ್ಯಕ್ತಿ ನಿಮ್ಮ ಮುಖ ನೋಡುತ್ತಾನೆ. ನಿಮ್ಮ ಸ್ವಭಾವಗುಣಗಳು ಹೇಗಿವೆ, ನೀವು ದೇವಾಜ್ಞೆಗಳನ್ನು ಹೇಗೆ ಪಾಲನೆ ಮಾಡುತ್ತಿರುವಿರಿ? ಎಂದು ನೋಡುತ್ತಾನೆ. ಅವು ಚೆನ್ನಾಗಿಲ್ಲವಾದರೆ ನಿಮ್ಮ ಕಾರಣದಿಂದ ತಪ್ಪು ಗ್ರಹಿಕೆ ಹೊಂದುತ್ತಾನೆ.'' ಆದುದರಿಂದ ಈ ಎಲ್ಲ ವಿಷಯಗಳನ್ನು ನೆನಪಿನಲ್ಲಿಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ– **ಮನ್ ಖತಲನಫ್‌ಸನ್ ಬಿಗೈರಿ ನಫ್‌ಸಿನ್ ಅವ್ ಫಸಾದಿನ್...** 'ಒಬ್ಬನು ನಿಷ್ಕಾರಣವಾಗಿ ಒಬ್ಬನನ್ನು

ಕೊಂದರೆ ಅವನು ಲೋಕದ ಜನರನ್ನು ಕೊಂದಂತೆ ಆಗುತ್ತೆ.' ಇದೇ ರೀತಿ ನಾನು ಹೇಳುತ್ತೇನೆ– ಒಬ್ಬನು ತನ್ನ ಸಹೋದರನೊಂದಿಗೆ ಸಹಾನುಭೂತಿಯಿಂದ ವರ್ತಿಸದಿದ್ದರೆ ಅವನು ಲೋಕದ ಎಲ್ಲ ಜನರೊಂದಿಗೆ ಸಹಾನುಭೂತಿ ತೋರಿಸದಂತೆ ಆಗುತ್ತದೆ. ನೀವು ಲೌಕಿಕ ಜೀವಿತವನ್ನು ಹೆಚ್ಚಾಗಿ ಪ್ರೀತಿಸಿ ನಿಮ್ಮ ವಿಶ್ವಾಸವನ್ನು ಕಳೆದುಕೊಳ್ಳಬೇಡಿರಿ. ಯಾವ ಜಮಾಅತನ್ನು ಅಲ್ಲಾಹನು ಲೋಕಕ್ಕೆ ಮಾದರಿಯನ್ನಾಗಿ ಮಾಡಲು ಬಯಸುತ್ತಾನೋ ಅದರಲ್ಲಿ ಸಾಹೋದರ್ಯ ಮತ್ತು ಸಹಾನುಭೂತಿ ಇಲ್ಲದ ಸ್ಥಿತಿ ಉಂಟಾದರೆ ಬಹಳ ಕೆಟ್ಟದಾಗುವುದು.

"ನಾನು ಸತ್ಯವಾಗಿ ಹೇಳುತ್ತೇನೆ– ಧರ್ಮಕಾರ್ಯದೊಂದಿಗೆ ಲೌಕಿಕ ಕಾರ್ಯ ಜಮಾಯಿಸಲಾರದು. ಆದರೆ ಧರ್ಮದ ಸೇವಕನಾಗಿ ಲೌಕಿಕ ಕಾರ್ಯ ನಿಶ್ಚಯವಾಗಿಯೂ ಆಗಬಹುದು. ಆದರೆ ಸಹಭಾಗಿಯಾಗಿ ಖಂಡಿತವಾಗಿಯೂ ಆಗಲಾರದು. ಯಾರ ಸಂಬಂಧ ಪರಿಪೂರ್ಣವಾಗಿ ಅಲ್ಲಾಹನೊಂದಿಗೆ ಸ್ಥಾಪಿತವಾಗಿದೆಯೋ ಅವನು ಆಹಾರ ಬೇಡಿಕೊಂಡು ಅಲೆದಾಡಿದುದಾಗಿ ನಾನು ಎಂದೂ ಕೇಳಿಲ್ಲ. ಅಲ್ಲಾಹನು ಅಂತಹ ವ್ಯಕ್ತಿಯ ಮಕ್ಕಳ ಮೇಲೆ ಸಹ ಅನುಗ್ರಹ ಮಾಡುತ್ತಾನೆ. ಬೈಅತ್ ಪ್ರಕಾರ ಯಾರು ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತಾನೋ ಅವನೇ ನಮ್ಮ ಜಮಾಅತಿಗೆ ಸೇರಿದವನಾಗಿರುತ್ತಾನೆ ಮತ್ತು ಯಾರು ಬೈಅತ್ ಪ್ರತಿಜ್ಞೆ ಪಾಲಿಸುತ್ತಾ ಅಲ್ಲಾಹನ ಕಡೆಗೆ ಚಲಿಸುತ್ತಾನೋ ಅವನಿಗೆ ಅಲ್ಲಾಹನು ಶಕ್ತಿಯನ್ನು ನೀಡುತ್ತಾನೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ನೋವಿನಿಂದ ಹೇಳಿದರು: "ನಮ್ಮ ಜಮಾಅತಿನವರು ಕೇವಲ ವಾಚಾಳಿಗಳಾಗಬಾರದು. ಅವರು ಬೈಅತ್ ಉದ್ದೇಶಗಳನ್ನು ಸತ್ಯವಾಗಿ ಈಡೇರಿಸುವವರಾಗಬೇಕು. ನೀವು ಆಂತರಿಕ ಪರಿವರ್ತನೆ ಮಾಡಬೇಕು. ನೀವು ಕೇವಲ ಧಾರ್ಮಿಕ ಸಮಸ್ಯೆಗಳ ಪರಿಹಾರದಿಂದ ಅಲ್ಲಾಹನನ್ನು ಸಂತೋಷಪಡಿಸಲಾರಿರಿ. ನಿಮ್ಮಲ್ಲಿ ಆಂತರಿಕ ಬದಲಾವಣೆ ಆಗಿಲ್ಲವಾದರೆ ನಿಮ್ಮಲ್ಲಿ ಮತ್ತು ಅನ್ಯರಲ್ಲಿ ಏನೂ ವ್ಯತ್ಯಾಸವಿರುವುದಿಲ್ಲ."

"ನಿಮ್ಮ ಆಂತರಿಕ ಬದಲಾವಣೆಗೆ ಪ್ರಯತ್ನಿಸಿರಿ. ನಮಾಝ್‌ನಲ್ಲಿ ದುಆ ಮಾಡಿರಿ. ದಾನಧರ್ಮ ಮಾಡಿರಿ. ಬೇರೆ ಉಪಾಯಗಳಿಂದಲೂ **ವಲ್ಲದೀನ ಜಾಹದೂ ಫೀನಾ** (ನಮ್ಮ ಬಗ್ಗೆ ಜಿಹಾದ್ ಮಾಡುವವರು) ಎಂಬವರಲ್ಲಿ ಸೇರಿಕೊಳ್ಳಿರಿ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಮಾಅತಿನ ಆಧ್ಯಾತ್ಮಿಕ ಮತ್ತು ನೈತಿಕ ಮಟ್ಟವನ್ನು ಉನ್ನತಗೊಳಿಸಲು ಅಸಂಖ್ಯಾತ ಉಪದೇಶಗಳನ್ನು ನೀಡಿದ್ದಾರೆ. ನಾವು ಅವುಗಳನ್ನು ನಮ್ಮ ಮುಂದೆ ಇರಿಸಿ ನಮ್ಮಲ್ಲಿ ಅನ್ಯರಿಗಿಂತ ಸ್ಪಷ್ಟ ವ್ಯತ್ಯಾಸ ಉಂಟುಮಾಡಲು ಪ್ರಯತ್ನಿಸಬೇಕು. ಹೀಗೆ ಮಾಡದೆ ನಾವು ಬೈಅತ್ ಉದ್ದೇಶಗಳನ್ನು ಈಡೇರಿಸಲಾರೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ– ಜ್ಞಾನಾಭಿವೃದ್ಧಿ ನಿಶ್ಚಯವಾಗಿಯೂ ಬಹಳ ಮುಖ್ಯವಾಗಿದೆ. ಆದರೆ ಅಲ್ಲಾಹನನ್ನು ಸಂತೋಷಪಡಿಸಲು ಮತ್ತು ಅವನ ಪ್ರೀತಿಯನ್ನು ಹೀರಲು ಕರ್ಮಗಳಲ್ಲಿ ಅಭಿವೃದ್ಧಿ, ನಮ್ಮ ಸ್ವಭಾವಗುಣಗಳ ಬದಲಾವಣೆ, ಅಲ್ಲಾಹನ ಆಜ್ಞೆಗಳನ್ನು ನಮ್ಮ ಸ್ವಭಾವಗುಣಗಳಲ್ಲಿ ಜಾರಿಗೊಳಿಸಿ ಅಲ್ಲಾಹನು **"ವಲ್ಲದೀನ ಜಾಹದೂ ಫೀನಾ"– ಯಾರು ನಮ್ಮನ್ನು ಭೇಟಿಯಾಗಲು ಪ್ರಯತ್ನಿಸುತ್ತಾರೋ** ಎಂದು ಹೇಳಿರುವನೋ ಅವರೊಂದಿಗೆ ಸೇರಲು ಪ್ರಯತ್ನಿಸಬೇಕು. ಈ ಪ್ರಯತ್ನ ಸ್ವಂತ ಆಶಾಭಿಲಾಷೆಗಳನ್ನು ತ್ಯಜಿಸಿ, ಪ್ರಾರ್ಥನೆ ಮತ್ತು ನಮಾಝ್‌ಗಳ ಮೂಲಕ ಅಲ್ಲಾಹನ ಸಹಾಯ ಬೇಡುತ್ತಾ ದಾನಧರ್ಮ ನೀಡುತ್ತಾ ಮಾಡಬೇಕು. ಅಲ್ಲಾಹನ ಪ್ರೀತಿಗಳಿಸುವ ಮಾರ್ಗಗಳನ್ನು ಪರೀಕ್ಷಿಸಬೇಕು. ಇಂತಹ ಜನರ ಪ್ರಯತ್ನವನ್ನು ನೋಡಿ ಅಲ್ಲಾಹನು ಹೇಳುತ್ತಾನೆ:

**ಲನಹ್‌ದಿಯನ್ನಹುಮ್ ಸುಬುಲನ–** ನಮ್ಮ ಮಾರ್ಗಗಳ ಕಡೆಗೆ ಆಗಮಿಸುವ ಭಾಗ್ಯ ನಾವು ಅವರಿಗೆ ನೀಡುವೆವು. ಅಲ್ಲಾಹನ ಸಾಮೀಪ್ಯ ಗಳಿಸಲು ಸ್ವತಃ ಪ್ರಯತ್ನಿಸುವುದು ಆವಶ್ಯಕವಾಗಿದೆ. ಆಗ ಅಲ್ಲಾಹನ ಸಾಮೀಪ್ಯ ದೊರಕುತ್ತದೆ. ಇದೇ ರೀತಿ ಅಲ್ಲಾಹನಿಗೆ ಪ್ರಿಯರಾದವರ ಪ್ರಾರ್ಥನೆಗಳ ವಾರೀಸುದಾರರಾಗಲು ನಮ್ಮನ್ನು ಆ ಪ್ರಾರ್ಥನೆಗಳ ಹಕ್ಕುದಾರರನ್ನಾಗಿ ಮಾಡಲು ಪ್ರಯತ್ನಿಸಬೇಕು.

ಈ ಜಲ್ಸಗಳು ಆ ಪ್ರಾರ್ಥನೆಗಳ ಪಾಲು ಪಡೆಯುವಂತಹ ಪರಿಸರವನ್ನು ನಿರ್ಮಿಸುತ್ತದೆ. ಅವುಗಳಲ್ಲಿ ನಾವು ನಮ್ಮನ್ನು ಪರಿಶೀಲಿಸಿ **ಹುಖೂಖುಲ್ಲಾಹ್** ಮತ್ತು **ಹುಖೂಖುಲ್ ಇಬಾದ್**ಗೆ ಸಂಬಂಧಿಸಿ ನಮ್ಮ ಮಟ್ಟದ ಉನ್ನತಿಗೋಸ್ಕರ ಪ್ರಯತ್ನಿಸಬೇಕು. ಅಲ್ಲಾಹನ ಪ್ರೀತಿಗಳಿಸುವ ಮಾರ್ಗದಲ್ಲಿ ನಾವು ವೇಗವಾಗಿ ಸಾಗಲು ಸಾಧ್ಯವಾಗಲಿ. ಅಲ್ಲಾಹನು ನಮಗೆ ಆ ಭಾಗ್ಯ ನೀಡಲಿ.

ಖಾದಿಯಾನಿನ ಜಲ್ಸದಲ್ಲಿ ಭಾಗವಹಿಸುವವರೊಂದಿಗೆ ನಾನು ಹೇಳಲು ಬಯಸುವುದೇನೆಂದರೆ, ಜಲ್ಸದಲ್ಲಿ ಭಾಗವಹಿಸುವ ಜನರು ಚಳಿಗಾಲಕ್ಕೆ ಅನುಕೂಲವಾದ ಬಟ್ಟೆಗಳನ್ನು ತರಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಆದುದರಿಂದ ಭಾರತದ ಜನರೂ, ಪಾಕಿಸ್ತಾನದವರೂ, ವಿದೇಶಗಳಿಂದ ಬರುವವರೂ ತಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಚಳಿಯನ್ನು ತಡೆಯುವ ಬಟ್ಟೆಗಳನ್ನು ತರಬೇಕು. ಜಲ್ಸಕ್ಕೆ ಆಗಮಿಸುವ ಮುಖ್ಯ ಉದ್ದೇಶ ಆಧ್ಯಾತ್ಮಿಕ ಅಭಿವೃದ್ಧಿ ಆಗಿದೆ. ಜಲ್ಸಕ್ಕೆ ಬಂದು ಅದರ ಪರಿಸರದ ಲಾಭ ಪಡೆಯುವಾಗ ಅಲ್ಪಸ್ವಲ್ಪ ಕಷ್ಟ ಅನುಭವಿಸಬೇಕಾಗಬಹುದು. ತ್ಯಾಗ ಮಾಡಬೇಕಾದೀತು. ಲೌಕಿಕ ಸೌಲಭ್ಯಗಳ ಕಡೆಗೆ ದೃಷ್ಟಿ ಇರಿಸದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತೀಕ್ಷೆ ಪ್ರಕಾರ ವರ್ತಿಸಲು ಪ್ರಯತ್ನಿಸಿರಿ. ಕೆಲವು ಹಳೆಯ ಅಹ್ಮದಿಯರ ಬಗ್ಗೆ ನನಗೆ ಅವರಿಗಿಂತ ಹೆಚ್ಚು ದೂರಲು ಇದೆ. ಲೌಕಿಕ ಅಭಿರುಚಿ

ಇರುವ ಜನರೊಂದಿಗೆ ನಾನು ಹೇಳಲು ಬಯಸುತ್ತೇನೆ– ಹೊಸದಾಗಿ ಜಮಾಅತಿಗೆ ಸೇರಿದವರ ಸ್ವಭಾವ ಮತ್ತು ನಿಷ್ಠೆ ನೋಡಿರಿ. ದುಆ ಮಾಡುತ್ತಾ ಸಮಯ ಕಳೆಯಿರಿ. ನೀವು ನಿಮ್ಮ ವಿಶ್ವಾಸ ಬಲಿಷ್ಠವಾಗಲು ಪ್ರಾರ್ಥಿಸುವ ಜೊತೆಗೆ ಜಮಾಅತಿನ ಅಭಿವೃದ್ಧಿ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ವರ್ಧಿಸಲು ಸಹ ಪ್ರಾರ್ಥಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತಿನಿಂದ ಪ್ರತೀಕ್ಷಿಸಿದುದನ್ನು ಗಳಿಸಲು ದುಆ ಮಾಡಿರಿ. ಸತ್ಯವಿಶ್ವಾಸಿಗಳ ಪ್ರಾರ್ಥನೆ ಒಬ್ಬರು ಇನ್ನೊಬ್ಬರಿಗೆ ಪ್ರಯೋಜನಕರವಾಗುತ್ತದೆ.

ಆದುದರಿಂದ ಜಮಾಅತಿಗೋಸ್ಕರ, ಖಲೀಫರಿಗೋಸ್ಕರ, ಮತ್ತು ಒಬ್ಬರು ಇನ್ನೊಬ್ಬರಿಗೋಸ್ಕರ ಪ್ರಾರ್ಥಿಸಿರಿ. ದುಆ ಮಾಡುವವರನ್ನು ಅಲ್ಲಾಹನು ತನ್ನ ಅನುಗ್ರಹದ ವಾರೀಸುದಾರರನ್ನಾಗಿ ಮಾಡುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಮಾಅತಿಗೋಸ್ಕರ ಮಾಡಿದ ದುಆಗಳಲ್ಲಿ ನಿಮ್ಮ ದುಆ ಸೇರುವುದು. ಜಲ್ಸ ಜಯಶಾಲಿಯಾಗಲು ಮತ್ತು ಶತ್ರುವಿನ ಪ್ರತಿಯೊಂದು ಕೆಡುಕು ಅವನ ಮೇಲೆಯೇ ಮರಳಿ ಬೀಳಲು ಪ್ರಾರ್ಥಿಸಿರಿ. ಏಕೆಂದರೆ ಶತ್ರು ಎಲ್ಲಿಯಾದರೂ ಏನಾದರೂ ಮಾಡಬಲ್ಲನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನೋದ್ದೇಶ ಅತ್ಯಂತ ಬೇಗನೆ ಈಡೇರುವುದನ್ನು ಕಾಣಲು ಸಹ ಪ್ರಾರ್ಥಿಸಿರಿ. ರಾತ್ರಿ ಹಗಲು, ಬೆಳಗ್ಗೆ ಸಾಯಂಕಾಲ ಅಲ್ಲಾಹನ ಧಿಕ್ರ್ ಮಾಡಿರಿ. ಹಾಗೆ ಮಾಡಿದರೆ ಜಲ್ಸದಲ್ಲಿ ಭಾಗವಹಿಸಿದ ಉದ್ದೇಶ ಈಡೇರಿಸುವವರಾಗುವಿರಿ. ಅಲ್ಲಾಹನು ಜಲ್ಸದಲ್ಲಿ ಸೇರುವ ಎಲ್ಲರಿಗೂ ಆ ಭಾಗ್ಯ ನೀಡಲಿ. ಮಸೀಹ್ ಮುಹಮ್ಮದಿಯವರೊಂದಿಗೆ ಸಂಬಂಧ ಸ್ಥಾಪಿಸಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯ ಕೆಳಗೆ ಲೋಕವು ಜಮಾಯಿಸುವ ದೃಶ್ಯ ಅಲ್ಲಾಹನು ನಮಗೆ ಬೇಗನೆ ತೋರಿಸಲಿ.

ಜುಮುಅ ನಮಾಝ್ ನಂತರ ಹಝ್ರತ್ ಖಲೀಫತುಲ್ ಮಸೀಹ್ ಅಯ್ಯದುಹುಲ್ಲಾಹು ತಆಲಾ ಒಬ್ಬ ಮಾಜಿ ಮುಬಲ್ಲಿಗ್ ಅಹ್ಮದ್ ಶಂಸೀರ್ ಸೂಖಿಯಾ ಸಾಹೇಬ್‌ರವರ ನಮಾಝೆ ಜನಾಝ ಗಾಯಿಬ್ ಅನುಷ್ಠಿಸಿದರು. 24–12–2014ರಂದು ಮೊರೀಷಸ್‌ನಲ್ಲಿ ಅವರು ನಿಧನ ಹೊಂದಿದರು. إِنَّا لِلّٰهِ وَإِنَّا إِلَيْهِ رَاجِعُونَ

ಹುಝೂರ್ ಹೀಗೆ ಹೇಳಿದರು: ಅವರು ಸರಳ ಜೀವಿಯಾಗಿದ್ದರು. ಅವರು ರಬ್ವದಲ್ಲಿ ಕಲಿಯುತ್ತಿದ್ದಾಗ ಜಲ್ಸ ಸಾಲಾನದ ಸಂದರ್ಭದಲ್ಲಿ ನಾವು ಜೊತೆಯಾಗಿ ಡ್ಯೂಟಿ ಮಾಡುತ್ತಿದ್ದೆವು. ಅತ್ಯಂತ ವಿನಯಾನ್ವಿತರಾಗಿದ್ದರು. ಎಲ್ಲರೊಂದಿಗೆ ಪ್ರೀತಿ ವಿಶ್ವಾಸದಿಂದ ವರ್ತಿಸುತ್ತಿದ್ದರು. ಅವರು ಜ್ಞಾನ ಪ್ರಿಯರಾಗಿದ್ದರು. ಅಲ್ಲಾಹನು ಅವರ ಪದವಿ ಉನ್ನತಗೊಳಿಸಲಿ ಮತ್ತು ಮಗ್‌ಫಿರತ್ ದಯಪಾಲಿಸಲಿ – ಆಮೀನ್.

–––––––––––––––*****–––––––––––––


*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 26 -12-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** Muhammad Yusuf | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**



***Email:*** *khutuba.kannada@gmail.com*